For more job news visit : www.kpscvaani.com

ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಚಾರಿಟೀಸ್
ಕೋಟೆ, ಬೆಂಗಳೂರು–560002.
ದೂರವಾಣಿ: 080–26701027, ಇ–ಮೇಲ್: slncharities@gmail.com

ಸಂಖ್ಯೆ: ಎಸ್‌ಎಲ್‌ಎನ್/74/2026–27 ದಿನಾಂಕ: 19.08.2026

ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಚಾರಿಟೀಸ್ ಅಡಿಯಲ್ಲಿ 1906ರಲ್ಲಿ ಸ್ಥಾಪಿತಗೊಂಡಿರುವ **ಎಸ್‌ಎಲ್‌ಎನ್ ಶಿಕ್ಷಣ ಸಂಸ್ಥೆಗಳ** ಸಮೂಹವು ಪ್ರೌಢಶಾಲೆ, ಶಿಕ್ಷಕರ ತರಬೇತಿ ಸಂಸ್ಥೆ, ಪದವಿ ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜುಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದು, ಶೈಕ್ಷಣಿಕ ಶ್ರೇಷ್ಠತೆ, ಮೌಲ್ಯಾಧಾರಿತ ಶಿಕ್ಷಣ ಹಾಗೂ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ಹೆಸರುವಾಸಿಯಾಗಿದೆ. ಸಂಸ್ಥೆಯ ಕೆಳಕಂಡ ಹುದ್ದೆಗಳಿಗೆ ಅರ್ಹ, ಅನುಭವ ಹೊಂದಿರುವ ಮತ್ತು ಕ್ರಿಯಾತ್ಮಕ ವೃತ್ತಿಪರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆಗಳು	
ಹುದ್ದೆ–1 : ಶೈಕ್ಷಣಿಕ ಆಡಳಿತಾಧಿಕಾರಿ ಶೈಕ್ಷಣಿಕ ಅರ್ಹತೆ: 1.ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಎಂ.ಎ., ಎಂ.ಎಸ್.ಸಿ., ಎಂ.ಕಾಂ., ಎಂಬಿಎ, ಪಿಹೆಚ್.ಡಿ., ಬಿ.ಇ./ಎಂ.ಇ. ಪದವಿ ಪಡೆದಿರಬೇಕು. 2.ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕನಿಷ್ಠ 10 ವರ್ಷಗಳ ಪಾಠ ಹಾಗೂ ಆಡಳಿತಾತ್ಮಕ ನಾಯಕತ್ವದ ಅನುಭವ ಹೊಂದಿರಬೇಕು. 3. ಯುಜಿಸಿ, ಎಐಸಿಟಿಇ, ಎನ್‌ಎಎಸಿ ಹಾಗೂ ಇತರೆ ನಿಯಂತ್ರಕ ಸಂಸ್ಥೆಗಳ ನಿಯಮಾವಳಿ ಮತ್ತು ಚೌಕಟ್ಟುಗಳ ಕುರಿತು ಸಮರ್ಪಕ ಜ್ಞಾನ ಹೊಂದಿರಬೇಕು.	ಎಸ್‌ಎಲ್‌ಎನ್ ಶಿಕ್ಷಣ ಸಂಸ್ಥೆಗಳ ಸಮೂಹದ ಶೈಕ್ಷಣಿಕ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸಿ, ಸಂಸ್ಥೆಗೆ ಕಾರ್ಯತಂತ್ರದ ನಿರ್ದೇಶನ, ಶೈಕ್ಷಣಿಕ ನಾಯಕತ್ವ ಹಾಗೂ ಆಡಳಿತಾತ್ಮಕ ಮೇಲ್ವಿಚಾರಣೆಯನ್ನು ಒದಗಿಸಬೇಕು. ಸಂಸ್ಥೆಯ ಶೈಕ್ಷಣಿಕ ಗುಣಮಟ್ಟ, ಆರ್ಥಿಕ ಸುಸ್ಥಿರತೆ, ಸುಶಾಸನ ಹಾಗೂ ನಿಯಂತ್ರಣ ಸಂಸ್ಥೆಗಳ ನಿಯಮಗಳ ಅನುಸರಣೆಯನ್ನು ಖಚಿತಪಡಿಸಬೇಕು. ಅತ್ಯುತ್ತಮ ಕಾರ್ಯನಿರ್ವಹಣೆಯ ದಾಖಲಾತಿ, ಸಮರ್ಥ ನಿರ್ವಹಣಾ ಕೌಶಲ್ಯ ಹಾಗೂ ಸ್ವತಂತ್ರವಾಗಿ ಮತ್ತು ತಂಡದೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿರಬೇಕು. ಶೈಕ್ಷಣಿಕ ಆಡಳಿತ, ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ನಾಯಕತ್ವದ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಅನುಭವ ಹೊಂದಿರಬೇಕು.
ಹುದ್ದೆ–2 : ಹಾಸ್ಟೆಲ್ ವಾರ್ಡನ್ ಶೈಕ್ಷಣಿಕ ಅರ್ಹತೆ: ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು. ಹಾಸ್ಟೆಲ್ ವಾರ್ಡನ್ ಆಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.	ವಿದ್ಯಾರ್ಥಿಗಳ ವಸತಿ ನಿಲಯದ ದೈನಂದಿನ ಕಾರ್ಯಾಚರಣೆ, ಸುರಕ್ಷತೆ ಹಾಗೂ ಶಿಸ್ತನ್ನು ನಿರ್ವಹಿಸಿ, ಕೊಠಡಿಗಳ ಹಂಚಿಕೆ, ನಿಗದಿತ ಸಮಯದ (Curfew) ನಿಯಮಗಳು ಮತ್ತು ನಡವಳಿಕೆ ನಿಯಮಗಳ ಪಾಲನೆಯನ್ನು ಖಚಿತಪಡಿಸುವುದು, ವಸತಿ ನಿಲಯದ ಸೌಲಭ್ಯಗಳ ಸಮರ್ಪಕ ನಿರ್ವಹಣೆ ಹಾಗೂ ಸಂರಕ್ಷಣೆ, ವಿದ್ಯಾರ್ಥಿ ಭೋಜನಾಲಯದ ಸ್ವಚ್ಛತೆ ಮತ್ತು ಆಹಾರದ ಗುಣಮಟ್ಟದ ಮೇಲ್ವಿಚಾರಣೆ, ವಿದ್ಯಾರ್ಥಿಗಳ ಆರೋಗ್ಯ, ಸುರಕ್ಷತೆ ಹಾಗೂ ಕಲ್ಯಾಣದ ಬಗ್ಗೆ ಅಗತ್ಯ ಕಾಳಜಿ ವಹಿಸುವುದು ಹಾಗೂ ತುರ್ತು ವೈದ್ಯಕೀಯ ಪರಿಸ್ಥಿತಿಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

ಎಲ್ಲಾ ಹುದ್ದೆಗಳಿಗೆ ಅಭ್ಯರ್ಥಿಗಳ ಶೈಕ್ಷಣಿಕ ಅರ್ಹತೆ, ಕೌಶಲ್ಯ ಹಾಗೂ ಅನುಭವಕ್ಕೆ ಅನುಗುಣವಾಗಿ ವೇತನವನ್ನು ನಿಗದಿಪಡಿಸಲಾಗುವುದು.

1. ಅರ್ಹ ಅಭ್ಯರ್ಥಿಗಳು ತಮ್ಮ ವಿವರವಾದ ರೆಸ್ಯೂಮ್ ಅನ್ನು ಸಂಬಂಧಿತ ಪ್ರಮಾಣಪತ್ರಗಳ ಪ್ರತಿಗಳೊಂದಿಗೆ, **10ನೇ ಸೆಪ್ಟೆಂಬರ್, 2026** ರೊಳಗೆ, "ಹುದ್ದೆಯ ಅರ್ಜಿ------" ಎಂದು ಬರೆದು ಬೆಂಗಳೂರು–02, ಫೋರ್ಟ್, ಎಸ್‌ಎಲ್‌ಎನ್ ಚಾರಿಟೀಸ್ ಅಧ್ಯಕ್ಷರಿಗೆ ಸಲ್ಲಿಸಬಹುದು.
2. ಅನುಭವವಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ.
3. ಆಯ್ಕೆ ಸಮಿತಿಯ ನಿರ್ಧಾರ ಅಂತಿಮವಾಗಿದೆ.
4. ಯಾವುದೇ ರೀತಿಯ ಪ್ರಭಾವ, ಒತ್ತಡ ಅಥವಾ ಶಿಫಾರಸ್ಸಿನ ಮೊರೆ ಹೋದಲ್ಲಿ, ಅಭ್ಯರ್ಥಿಯ ಅರ್ಜಿಯನ್ನು ಅನರ್ಹವೆಂದು ಪರಿಗಣಿಸಲಾಗುವುದು.

ಸಹಿ/– ಅಧ್ಯಕ್ಷರು
ಎಸ್‌ಎಲ್‌ಎನ್ ಚಾರಿಟೀಸ್
ಕೋಟೆ, ಬೆಂಗಳೂರು–560 002

SCAN AnyScanner